ಸರ್ಕಾರದ ಗಮನಕ್ಕೆ ಬಂದಿದ್ದು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು ಗುರುಪ್ರಸಾದ್ ಸಮಿತಿಯ ವರದಿ ಪ್ರಕಾರ ಒಂದು ಸಪರೇಟ್ ಡೈರೆಕ್ಟರ್ ಅನ್ನು ಮಾಡುತ್ತೀರಾ? ಮೂರನೆಯದು, ಪ್ರತಿ ಒಂದು ಜಿಲ್ಲೆಯಲ್ಲಿ ೩೦-೪೦ ಹಾಸ್ಪೆಲ್‌ಗಳ ಸೂಪರಿಂಟೆಂಡೆಂಟ್ ಅವರನ್ನು ಅಪಾಯಿಂಟ್ ಮಾಡಿಲ್ಲ. ಇದರಿಂದ ಅನಾಹುತವಾಗುತ್ತಿದೆ. ಹಾಸ್ಪೆಲ್‌ಗಳಲ್ಲಿ ಹುಡುಗರನ್ನು ಕರಿ ತುಂಬಿದ ಹಾಗೆ ತುಂಬುತ್ತಾರೆ. ಅದನ್ನು ದಯವಿಟ್ಟು ಸರಿಪಡಿಸುವುದಕ್ಕೆ ಕ್ರಮತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಸ್ಪೆಲ್‌ಗಳಿಗೆ ಸ್ವಂತ ಕಟ್ಟಡ ಇಲ್ಲ. ದಯವಿಟ್ಟು ಈ ಕೊರತೆಯನ್ನು ನೀಗ ಬೇಕು. ಇದರ ಜೊತೆಗೆ ಜಮಖಾನದ ಒಂದು ಪೀಸ್ ಕೊಟ್ಟಿದ್ದೀರಿ. ಅದು ಬಹಳ ಹಿಂದಿನದು, ಸುಮಾರು ೧೦ ವರ್ಷಗಳಿಂದ ಯೂಸ್ ಮಾಡಿರತಕ್ಕದ್ದು. ಅದನ್ನು ಹೊದ್ದುಕೊಳ್ಳುವುದಕ್ಕೆ ಆಗುವುದಿಲ್ಲ. ಟ್ರಂಕ್ ಸಹ ಕೊಟ್ಟಿಲ್ಲ, ಇದನ್ನು ಸರಿಪಡಿಸಬೇಕು ಎಂದು ಕೋರಿಕೆ. ತಾವು ಐದು ಪರ್ಸೆಂಟ್ ಹಾಸ್ಪೆಲ್ ಫೆಸಿಲಿಟಿ ಕೊಟ್ಟಿಲ್ಲ. ೆಂಗೆ ಪರ್ಸೆಂಟ್ ಅಲ್ಲಿ ಡ್ರಾಪ್ ಔಟ್ಸ್ ಆಗುತ್ತಿದೆ. ದಯವಿಟ್ಟು ಫೆಸಿಲಿಟೀಸ್ ಅನ್ನು ಜಾಸ್ತಿ ಮಾಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಹೇಳಿರ ತಕ್ಕ ಒಂದು ಅಂಶ ಸರಿಯಾಗಿದೆ. ಡ್ರಾಪ್ ಔಟ್ಸ್‌ಗಳು ಆಗುತ್ತಿವೆ. ನಿಜ. ಹಾಸ್ಪೆಲ್ ಫೆಸಿಲಿಟೀಸ್ ಗಳು ಬಡವರ ಮಕ್ಕಳಿಗೆ ಸಿಕ್ಕದೇ ಇರುವುದರಿಂದ ಅವರು ಶಿಕ್ಷಣವನ್ನು ಬಿಟ್ಟು ಬಿಡುತ್ತಾರೆ. ಅದಕ್ಕೆ ಹಚ್ಚಿನ ಆದ್ಯತೆ ಕೊಟ್ಟು ಎಲ್ಲಾ ಜಿಲ್ಲೆಗಳಲ್ಲಿ ಸಮನಾಗಿ ಅವಕಾಶವನ್ನು ಮಾಡಿಕೊಡಲು ಪ್ರಯತ್ನ ಮಾಡಿದ್ದೇನೆ. ಜಮಖಾನ್ ಬಗ್ಗೆ, ಟ್ರಂಕ್ ಬಗ್ಗೆ ಕೇಳಿದ್ದಾರೆ ಕಳೆದರ್ಜೆ ಜಮಖಾನ್ ಕೊಟ್ಟಿದ್ದಾರೆಂದು ಸೇಳಿದ್ದಾರೆ.ದಯವಿಟ್ಟು ನಿರ್ದಿಷ್ಟವಾದ ಪ್ರಕರಣವನ್ನು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಏಕೆಂದರೆ ಈ ವರ್ಷ ಜಿಲ್ಲಾ ಪರಿಷತ್ತು ನೇರವಾಗಿ ಅವುಗಳನ್ನು ಸಪ್ಲೈ ಮಾಡಿರುವುದು ಅದು ಸರ್ಕಾರದ ಇಲಾಖೆಗಳಿಂದ ಹೋಗಿಲ್ಲ. ಈಗ ಜಿಲ್ಲಾ ಪರಿಷತ್ ಹಾಗೂ ಮಂಡಲ್ ಆಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡಿ ಕೊಟ್ಟಿರುವ ಹಣ ದುರುಪಯೋಗ ಆಗದಂತೆ ನೋಡಿಕೊಳ್ಳುತ್ತೇನೆ, ಜೊತೆಗೆ ದುರುಪಯೋಗದ ಪ್ರಕರಣಗಳು ಇದ್ದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ. ಗವರ್ನ್‌ಮೆಂಟ್ ಇನ್ ಏಡ್ ಹಾಸ್ಪೆಲ್‌ಗಳಲ್ಲಿ ಸುಳ್ಳು ಲೆಕ್ಕ ಬರೆಯುತ್ತಿರುವುದೂ ಸಹ ಗೊತ್ತಿದೆ. ಹಿಂದೆ ಮಾನ್ಯ ಬಸವಣ್ಣೆಪ್ಪನವರು ಸಮಾಜ ಕಲ್ಯಾಣ ಸಚಿವರು ಆಗಿದ್ದಾಗ ಇದರ ಬಗ್ಗೆ ದೊಡ್ಡವಾಗಿ ತನಿಖೆ ಮಾಡಿಸಿದ್ದಾರೆ. ಇದರ ಬಗ್ಗೆ ಕ್ರಮವನ್ನೂ ತೆಗೆದುಕೊಂಡಿದ್ದಾರೆ. ವಿಚಿತ್ರವಾಗಿ ಇಂತಹ ಕಡೆ ಇಂತಹ ಪ್ರಕರಣಗಳು ಆಗಿದೆ ಎನ್ನುವುದರ ಬಗ್ಗೆ ತಿಳಿಸಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಹಾಸ್ಪೆಲ್‌ಗಳಿಗೆ ಸ್ವಂತ ಕಟ್ಟಡಗಳು ಇಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೊಸ್ಕರ ನಮ್ಮ ಇಲಾಖೆಗಳ ಕಾರ್ಯದರ್ಶಿಯವರ ಜೊತೆ ಚರ್ಚೆ ಮಾಡಿ ಬಿ ಸಿ. ಎಂ, ಹಾಸ್ಪೆಲ್ ಎಸ್. ಸಿ ಎಸ್. ಟಿ. ಹಾಸ್ಪೆಲ್, ಆಶ್ರಮ ಶಾಲೆಗಳು ಎಲ್ಲಿ ಇಲ್ಲ, ಅಲ್ಲಿ ಅದ್ಯತೆ ಕೊಟ್ಟು ಹಾಸ್ಪೆಲ್ ವ್ಯವಸ್ಥೆಯನ್ನು ಮಾಡಿಸುತ್ತೇನೆ. ಅದಕ್ಕೊಸ್ಕರವಾಗಿ ಹೌಸಿಂಗ್ ಡಿಪಾರ್ಟ್‌ಮೆಂಟ್‌ನವರ ಜೊತೆ ಚರ್ಚೆ ಮಾಡಿ ಹುಡ್ಕೋ ಇವರ ಒಂದು ಸಹಕಾರವನ್ನು ಪಡೆದು ಮತ್ತು ಒಂದು ಸಾಲದ ರೂಪದಲ್ಲಿ ಮೊತ್ತವನ್ನು ಪಡೆದು ಈ ವ್ಯವಸ್ಥೆ ಬಗ್ಗೆ ಕೊಡಬೇಕೆಂದು ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ ಶಾಸಕ ಮಿತ್ರರಾದ ಮಾನ್ಯ ಗುರುಪ್ರಸಾದ್ ಅಧ್ಯಕ್ಷತೆಯಲ್ಲಿ ರಚನೆ ಆಗಿರತಕ್ಕ ವರದಿಯ ಬಗ್ಗೆಯೂ ಸಹ ಮಾನ್ಯ ಶಾಸಕರು ಕೇಳಿದ್ದಾರೆ. ಅವರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಬಹುಮತೀಕ ಸಲಹೆಗಳನ್ನು ಓಪ್ಪಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕರ್ನಾಟಕ ರೇಷ್ಮೆ ಯೋಜನೆಯ ಎರಡನೆಯ ಹಂತ

೪೧೬. ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ರೇಷ್ಮೆ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಮಂತ್ರಿಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ರೇಷ್ಮೆ ಕೃಷಿಗೆ ಕೈಗಾರಿಕೆಯ ವಿಸ್ತರಣೆಗೆ ಹಾಗೂ ಅಭಿವೃದ್ಧಿಗೆ ವಿಶ್ವಬ್ಯಾಂಕಿನ ಎರಡನೇ ಹಂತದ ನೆರವಿನ ಯೋಜನೆಯ ಕರಡನ್ನು ತಯಾರಿಸಲಾಗಿದೆಯೇ ?

ಆ) ಈ ಯೋಜನೆಯಲ್ಲಿ ಉತ್ಪಾದನಾ ಹಾಗೂ ಅನುತ್ಪಾದನಾ ಬಾಬುಗಳಿಗೆ ಎಷ್ಟು ವೆಚ್ಚ ಮಾಡಲು ಯೋಜನೆಯನ್ನು ತಯಾರಿಸಲಾಗಿದೆ ?

ಇ) ರೇಷ್ಮೆ ಗುಣಮಟ್ಟದ ಹಾಗೂ ರೇಷ್ಮೆ ಇಳುವರಿಯನ್ನು ಅಭಿವೃದ್ಧಿಪಡಿಸಲು ಯಾವುದಾದರೂ ಯೋಜನೆಗಳನ್ನು ಮೇಲಿನ ಕರಡಿನಲ್ಲಿ ಅಳವಡಿಸಲಾಗಿದೆಯೇ ?

ಶ್ರೀ ಕೃಷ್ಣ, (ರೇಷ್ಮೆ ಹಾಗೂ ಪಶುಸಂಗೋಪನಾ ಸಚಿವರು).—

ಅ) ತಯಾರಿಸಲಾಗಿದೆ.

ಆ) ಯೋಜನೆಯ ಒಟ್ಟು ಅಂದಾಜು ವೆಚ್ಚ ೧೯೬.೫೦ ಕೋಟಿ ರೂಪಾಯಿಗಳು.

ಇ) ಅಳವಡಿಸಲಾಗಿದೆ.

೧೦–೫೦ಪಿ. ಎಂ.

ಶ್ರೀ ಜಿ. ರಾಜಗೌಡ. —ಇದನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ತಯಾರಿಸಲಾಗಿದೆ' ಎಂದು ಹೇಳಿದ್ದೀರಿ. ಈ ಯೋಜನೆಯ ಕರಡಿನ ಬಗ್ಗೆ ಅಂತಿಮ ತೀರ್ಮಾನ ಕೈಕೊಳ್ಳುವುದಕ್ಕೆ ಮೊದಲು ಶಾಸಕರ ಒಂದು ಸಭೆಯನ್ನು ಕರೆಯುತ್ತೀರಾ ? ಈ ಯೋಜನೆಯ ಒಟ್ಟು ಅಂದಾಜು ವೆಚ್ಚವಾದಂಥ ೧೯೬.೫೦ ಕೋಟಿ ರೂಪಾಯಿಗಳ ಪೈಕಿ ಉತ್ಪಾದನಾ ವೆಚ್ಚವೆಷ್ಟು ಮತ್ತು ಅನುತ್ಪಾದನಾ ಬಾಬುಗಳಿಗೆ ಆಗುವಂತಹ ವೆಚ್ಚ ಎಷ್ಟು ಎಂಬುದನ್ನು ತಿಳಿಸುತ್ತೀರಾ ? ಕೊನೆಯದಾಗಿ ಈ ರೇಷ್ಮೆ ಗುಣಮಟ್ಟ ಮತ್ತು ರೇಷ್ಮೆ ಇಳುವರಿಯನ್ನು ಅಭಿವೃದ್ಧಿಪಡಿಸಲು ಏನೇನು ಕ್ರಮ ಕೈಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಕೃಷ್ಣ.—ಇದಕ್ಕೆ ಸಂಬಂಧಪಟ್ಟಂತೆ ಒಂದು ಸಲಹಾ ಸಮಿತಿ ಇದೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಆ ಸಲಹಾ ಸಮಿತಿಯ ಸಭೆಯನ್ನು ಕರೆದು, ಸಂಬಂಧಪಟ್ಟ ಶಾಸಕರನ್ನು ಸಹ ಆ ಸಭೆಗೆ ಕರೆದು ಈ ಕರಡು ಯೋಜನೆಯ ಬಗ್ಗೆ ಶಾಸಕರ ಅಭಿಪ್ರಾಯಗಳನ್ನು ಪಡೆದುಕೊಳ್ಳುತ್ತೇವೆ. ಮತ್ತೆ ಎರಡನೆಯದಾಗಿ ಈ ೧೯೬.೫೦ ಕೋಟಿ ರೂಪಾಯಿಗಳಲ್ಲಿ ಉತ್ಪಾದನಾ ವೆಚ್ಚವೆಷ್ಟು ಮತ್ತು ಅನುತ್ಪಾದನಾ ವೆಚ್ಚವೆಷ್ಟು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾವು ಮೊದಲನೇ ಹಂತದ ಯೋಜನೆಯಲ್ಲಿ ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟಿದ್ದು, ಮಾರ್ಕೆಟ್‌ಗಳನ್ನು ಕಟ್ಟಿಸಿದ್ದು, ಜೀಪುಗಳನ್ನು ಕೊಂಡಿದ್ದು ಅನುತ್ಪಾದನಾ ವೆಚ್ಚ ಎಂಬ ಭಾವನೆ ಮಾನ್ಯ ಸದಸ್ಯರಲ್ಲಿ ಇದೆ. ಈ ರೇಷ್ಮೆ ಕೃಷಿಯನ್ನ ಅಭಿವೃದ್ಧಿಪಡಿಸಲು ಇನ್‌ಫ್ರಾಸ್ಟ್ರಕ್ಚರ್‌ನ ಅವಶ್ಯಕತೆ ಇದೆ. ಆದ್ದರಿಂದ ಇದನ್ನೆಲ್ಲಾ ಅನುತ್ಪಾದನಾ ಬಾಬುಗಳೆಂದು ಹೇಳುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಶಾಸಕರ ಅಭಿಪ್ರಾಯ ಏನಿದೆ, ರೇಷ್ಮೆ ಬೆಳೆಗಾರರ ಅಭಿಪ್ರಾಯ ಏನಿದೆ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾವು ಎರಡನೇ ಹಂತದ ಕರಡು ಯೋಜನೆಯನ್ನು ತಯಾರಿಸಿದ್ದೇವೆ. ಈ ರೇಷ್ಮೆ ಕೃಷಿಗೆ ಹೆಚ್ಚಿನ ಆದ್ಯತೆ ಕೊಡುವ ರೀತಿಯಲ್ಲಿಯೇ ನಾವು ಇದನ್ನು ತಯಾರು ಮಾಡಿದ್ದೇವೆ.

ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಭತ್ಯೆ.

೩೦೭೦. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭, ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೊಳಪಟ್ಟಿರುವ ಹಳ್ಳಿಗಳಲ್ಲಿ ಸರಕಾರದಿಂದ ವಿತರಣೆಯಾಗಿರುವ ಹೆರಿಗೆ ಭತ್ಯದ ಮೊತ್ತವೆಷ್ಟು ? ಹೆರಿಗೆ ಭತ್ಯೆ ಪಡೆದ ಜನರ ಸಂಖ್ಯೆಯೆಷ್ಟು ?

ಆ) ಈ ಹಣದ ವಿತರಣೆಯಲ್ಲಿ ವಿಳಂಬ ಧೋರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?